ವಿಶಾಲಾಕ್ಷಮ್ಮ ಬಾಯಿ ಬಿಟ್ಟಳು.

"ಸುಮಾರು ಆರು ತಿಂಗಳ ಹಿಂದೆ ಸಾಹೇಬರು ನನ್ನೊಡನೆ ಮಾತನಾಡುತ್ತಾ ತಮ್ಮ ಒಂಟಿತನ, ಮಗ ಮನೆಬಿಟ್ಟು ಹೋಗಿದ್ದು, ಸೊಸೆ ದೂರವಾಗಿದ್ದು, ಹಣದ ಆಸೆಯ ಬಂಧುಗಳ ಬಗ್ಗೆ ಹೇಳಿಕೊಂಡಿದ್ದರು. ಹಾಗಾಗಿ ಇನ್ನೊಂದು ಮದುವೆ ಆಗುವುದಾಗಿಯೂ ಅಂದಿದ್ದರು. ಆಗ ಅವರು ನನ್ನ ಬಗ್ಗೆ ಹೇಳುತ್ತಿದ್ದಾರೆ ಎಂದು ಅನಿಸಿರಲಿಲ್ಲ. ಸ್ವಲ್ಪ ದಿನದ ನಂತರ ನನ್ನನ್ನು ಒಪ್ಪಿಸಿ ದೇವರ ಮುಂದೆ ನನಗೆ ತಾಳಿ ಕಟ್ಟಿದ್ದರು. ನಾನೂ ಕೂಡಾ ಅವರನ್ನು ನನ್ನ ಪತಿ ಅಂದುಕೊಂಡೇ ತಿಳಿದುಕೊಂಡು ಸೇವೆ ಮಾಡುತ್ತಿದ್ದೆ.

ಸ್ವಲ್ಪ ದಿನಗಳ ನಂತರ ಎಲ್ಲಾ ಆಸ್ತಿಯನ್ನು ನಿನ್ನ ಹೆಸರಿಗೆ ಬರೆಯುತ್ತಿದ್ದೇನೆ ಎಂದು ಹೇಳಿ ನನ್ನಿಂದ ಒಂದು ಪೇಪರ್ ಮೇಲೆ ಸಹಿ ತೆಗೆದುಕೊಂಡಿದ್ದರು. ಆಮೇಲೆ ಗೊತ್ತಾಯಿತು, ಅದು ಇವರಿಗೆಲ್ಲ ಪಾಠ ಕಲಿಸಲು ಆಡಿದ ನಾಟಕ ಎಂದು. ನಾನೂ ದಡ್ಡಳಂತೆ ಅವರನ್ನು ನನ್ನ ಪತಿ, ನನ್ನ ಹೆಸರಿಗೇ ಆಸ್ತಿ ಬರೆದಿದ್ದಾರೆ ಎಂದೇ ತಿಳಿದುಕೊಂಡಿದ್ದೆ. ನನ್ನ ಮಗ ಸುನೀಲ್ ಇದೆಲ್ಲಾ ತಿಳಿದ ನಂತರ ಈ ಲಾಯರ್ ನಾಗಭೂಷಣನ ಬಳಿ ಹೋಗಿ ವಿಲ್ ವಿಚಾರ ಪ್ರಸ್ತಾಪ ಮಾಡಿದಾಗ ಲಾಯರ್ ಇವರು ವಿಲ್ ಬದಲಾಯಿಸಿದ್ದಾರೆ ಎಂದು ಹೇಳಿದರು. ಇದರಿಂದ ಶಾಕ್ ಆದ ಸುನೀಲ್ ಕೋರ್ಟ್‌ಗೆ ಹೊಗುವುದಾಗಿ ಹೇಳಿದ. ಆಗ ಈ ಲಾಯರ್, ಕೇಸ್ ನಿಲ್ಲುವುದಿಲ್ಲ ಹಾಗೂ ಅವರ ಆಸ್ತಿಯ ಇತರೇ ಪಾಲುದಾರರು ಹಾಗೂ ಜೀವನಾಂಶ ಕೇಳುತ್ತಿದ್ದ ರಜನಿ ಒಪ್ಪುವುದಿಲ್ಲ ಎಂದರು. ಅದಾದ ಮೇಲೆ ಇವರನ್ನೆಲ್ಲಾ ಒಮ್ಮೆ ಕರೆಸಿದರು. ಕೇಸ್ ಹಾಕಿದರೆ ಯಾರಿಗೂ ಲಾಭ ಇಲ್ಲ. ವಿಶ್ವನಾಥಯ್ಯ ಸುದ್ದಿ ತಿಳಿಯುತ್ತಲೇ ವಿಲ್ ಬದಲಾಯಿಸಿ ಬಿಟ್ಟರೆ ಹಾಗೂ ಆ ವಿಲ್ ಅನ್ನು ರಿಜಿಸ್ಟರ್ ಮಾಡಿಸಿದರೆ ಎಲ್ಲ ಮುಗಿದು ಹೋಗುತ್ತದೆ. ಹಾಗಾಗಿ ಎಲ್ಲಾ ಸೇರಿ ಈ ನಾಟಕ ಆಡಿದೆವು. ಲಾಯರ್ ಹೇಳಿದಂತೆ ನಾನೇ ಎಲ್ಲರಿಗೂ ಫೋನ್ ಮಾಡಿ ಬರಲು ಹೇಳಿದೆ. ಈ ಲಾಯರ್ ಸದ್ದು ಮಾಡದೇ ಇರುವ ಒಂದು ಪಿಸ್ತೂಲನ್ನು ತಂದು ಮನೆಯಲ್ಲಿ ಇಟ್ಟಿದ್ದರು. ಅವರೆಲ್ಲ ಬಂದಾಗ ಸಾಹೇಬರು ಸಿಟ್ಟಾಗಿ ಯಾರನ್ನೂ ಮಾತಾಡಿಸದೇ ರೂಂಗೆ ಹೋಗಿ ಮಲಗಿದ್ದರು. ಇವರಿಗೆ ಬೆಳಗಿನ ಜಾವ ಎದ್ದು ಈ ಕೋಣೆಯಲ್ಲಿ ವ್ಯಾಯಾಮ ಮಾಡುವ ಹವ್ಯಾಸ ಇದ್ದುದರಿಂದ ಅಲ್ಲಿಯೇ ಇರುತ್ತಾರೆ ಎಂಬುದು ಗೊತ್ತಿತ್ತು ನನಗೆ. ಬೆಳಗ್ಗೆ ಸುಮಾರು ಆರುಗಂಟೆ ಹೊತ್ತಿಗೆ ಸುನೀಲ್ ಬೆಡ್ ರೂಂನಿಂದ ಒಳ ಪ್ರವೇಶಿಸಿದ. ಅವನನ್ನು ನೋಡಿದ ಇವರು ಕಳ್ಳ ಇರಬೇಕು ಅಂತ ಅವನ ಕೈಗೆ ಅಲ್ಲೇ ಇದ್ದ ಸಣ್ಣ ಚಾಕುವಿನಿಂದ ತಿವಿದು ಬಿಟ್ಟರು. ಅದೇ ಸಮಯದಲ್ಲಿ ಕಾರಿಡಾರ್ ಬಾಗಿಲು ತಟ್ಟಿದ ಶಬ್ದ ಆಗಿ ನಾನೇ ಇರಬೇಕು ಎಂದುಕೊಂಡು ಬಾಗಿಲು ತೆರೆದರು. ಸಾವರಿಸಿಕೊಂಡ ಸುನೀಲ್ ಓಡಿ ಹೋಗಿ ಇವರನ್ನು ಹಿಡಿದುಕೊಂಡ. ಅಷ್ಟರಲ್ಲಿ ಅಲ್ಲಿಗೆ ಬಂದಿದ್ದ ರಜನಿ ಪಿಸ್ತೂಲಿನಿಂದ ಗುಂಡು ಹಾರಿಸಿದಳು."

ಲಾಯರ್ ನಾಗಭೂಷಣ ಕುಸಿದು ಬಿದ್ದ. ಉಳಿದವರ ಮುಖಗಳೆಲ್ಲವೂ ಬಣ್ಣಕಳೆದುಕೊಂಡಿದ್ದವು. ನಿಟ್ಟುಸಿರು ಬಿಡುತ್ತಾ ಇನ್‌ಸ್ಪೆಕ್ಟರ್ ನಾಗರಾಜಯ್ಯ "ಇನ್ನು ಏನೋ ಮುಚ್ಚಿ ಇಡುತ್ತಿದ್ದೀಯ. ಇವರು ಸತ್ತರೆ ನಿನಗೆ ಲಾಭ. ಇವರೆಲ್ಲಾ ಯಾಕೆ ನಿನಗೆ ಸಹಾಯ ಮಾಡುತ್ತಾರೆ. ಇಲ್ಲ ನೀನು ಸಿಕ್ಕಿ ಹಾಕಿಕೊಂಡರೆ ಇವರಿಗೇ ಆಸ್ತಿ ಸಿಗುತ್ತದೆ. ಇದರಿಂದ ನಿನಗೇನು ಲಾಭ. ಇದನ್ಯಾಕೋ ನಂಬುವಂತಿಲ್ಲ."

"ಎಲ್ಲ ಸರಿಯಾಗಿ ಮಾಡಿ, ನನ್ನ ಮೇಲೆ ಆಪಾದನೆ ಬರುವ ಹಾಗೆ ಮಾಡಿ, ನಂತರ ಸರಿಯಾದ ಸಾಕ್ಷಿ ಇಲ್ಲದೇ ಅವನನ್ನು ಕೇಸ್‌ನಲ್ಲಿ ಖುಲಾಸೆ ಮಾಡಿಸುತ್ತೇನೆ ಎಂದು ಈ ಲಾಯರ್ ಭರವಸೆ